Fax: 08282-256262
E-mail:kuvempuacademic@gmail.com

Phone No - 08282-256149
Website :www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.
**Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO Rankings**

ಸಂಖ್ಯೆ:ಕುವಿ:ಶೈವಿ:ಎಸಿ–6: 1515 :2021–22 ದಿನಾಂಕ:25–08–2021

## ಅಧಿಸೂಚನೆ

**ವಿಷಯ:– 2021–22ನೇ ಶೈಕ್ಷಣಿಕ ಸಾಲಿನ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ವಿಶ್ವವಿದ್ಯಾಲಯದ ಪ್ರಥಮ ವರ್ಷದ ವಿವಿಧ ಸ್ನಾತಕ ಪದವಿಗಳಿಗೆ ಆನ್‌ಲೈನ್ ಪ್ರವೇಶಾತಿ ಕುರಿತು.**

ಉಲ್ಲೇಖ:– 1. ಸರ್ಕಾರದ ಆದೇಶ ಸಂಖ್ಯೆ: ಕಾಶಿಇ:ಶೈವಿ:45/ಪ್ರವೇಶಾತಿ ಮಾರ್ಗಸೂಚಿ:2021–22, ದಿನಾಂಕ:21–08–2021
2. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರ ಮಾರ್ಗಸೂಚಿ.
3. ಸುತ್ತೋಲೆ ಸಂಖ್ಯೆ:ಕುವಿ:ಎಸಿ–5/572/2019–20, ದಿನಾಂಕ:03–05–2019.
4. ಸುತ್ತೋಲೆ ಸಂಖ್ಯೆ:ಕುವಿ:ಎಸಿ–5/846/2020–21, ದಿನಾಂಕ:17–07–2020.
5. ಸುತ್ತೋಲೆ ಸಂಖ್ಯೆ:ಕುವಿ:ಎಸಿ–5/1988/2020–21, ದಿನಾಂಕ:21–09–2020.
6. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:25–08–2021.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ವಿವಿಧ ಸ್ನಾತಕ ಪದವಿಗಳ ಪ್ರವೇಶಾತಿಯನ್ನು ಆನ್‌ಲೈನ್ ಮೂಲಕ ನಿರ್ವಹಿಸಲು ತಿಳಿಸಿ, ಉಲ್ಲೇಖ (2)ರಲ್ಲಿ ಮಾರ್ಗಸೂಚಿಯನ್ನು ಕಳುಹಿಸಿರುತ್ತಾರೆ. ಹಿಂದಿನ ಶೈಕ್ಷಣಿಕ ಸಾಲಿನಲ್ಲಿರುವಂತೆ **ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಶುಲ್ಕವನ್ನು** Online Software ನಲ್ಲಿ ಅಳವಡಿಸಲಾಗಿದೆ. ಎಲ್ಲಾ ಸಂಯೋಜಿತ ಕಾಲೇಜಿನ ಪ್ರಾಂಶುಪಾಲರುಗಳು ಕಾಲೇಜಿನಲ್ಲಿ ಉಳಿಸಿಕೊಳ್ಳುವ **ಕ್ರೀಡಾ ಶುಲ್ಕ, ಅಭಿವೃದ್ಧಿ ಶುಲ್ಕ, ಪಠ್ಯೇತರ ಚಟುವಟಿಕೆ ಶುಲ್ಕ, ಪ್ರಯೋಗಾಲಯ ಶುಲ್ಕ ಮತ್ತು ಬೋಧನಾ ಶುಲ್ಕವನ್ನು** Online Software ನಲ್ಲಿ ನಮೂದಿಸತಕ್ಕದ್ದು, 2019–20ನೇ ಶೈಕ್ಷಣಿಕ ಸಾಲಿಗೆ ಇರುವ ಪ್ರವೇಶ ಶುಲ್ಕವನ್ನೆ 2021–22ನೇ ಶೈಕ್ಷಣಿಕ ಸಾಲಿಗೆ ಮುಂದುವರಿಸಲಾಗಿದೆ.

ಘಟಕ/ನೇರ ಆಡಳಿತಕ್ಕೊಳಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು ಆಡಳಿತ ಶುಲ್ಕ (Administrative Fee as in Fee Structure 2019-20) ಹೊರತುಪಡಿಸಿ ಉಳಿದಂತೆ ಕ್ರಮಸಂಖ್ಯೆ 3 ಮತ್ತು 5 ರಲ್ಲಿರುವ ಶುಲ್ಕಗಳನ್ನು ಹಾಗೂ ಕ್ರೀಡಾಭಿವೃದ್ಧಿ, ಪಠ್ಯೇತರ ಚಟುವಟಿಕೆ ಹಾಗೂ ಕಾಲೇಜಿನಲ್ಲಿ ಉಳಿಸಿಕೊಳ್ಳಲಾಗುವ ಶುಲ್ಕವನ್ನು UUCMS Portal ನಲ್ಲಿ ಅಳವಡಿಸಿಕೊಳ್ಳತಕ್ಕದ್ದು. **ಪ್ರವೇಶ ಶುಲ್ಕದ ಪಟ್ಟಿ ಹಾಗೂ ಸ್ನಾತಕ ಪದವಿಯ ಸೂಚನೆಗಳು ಮತ್ತು 1 ರಿಂದ 9ರವರೆಗಿನ ಅನುಬಂಧಗಳನ್ನು** ವಿಶ್ವವಿದ್ಯಾಲಯದ ಅಂತರ್‌ಜಾಲದಲ್ಲಿ (www.kuvempu.ac.in) ಮಾಹಿತಿಗಾಗಿ ಪ್ರಕಟಿಸಲಾಗಿದೆ. ಸರ್ಕಾರದ ಆದೇಶದನ್ವಯ ಪ್ರವೇಶಾತಿ ಪ್ರಕ್ರಿಯೆಯನ್ನು **ದಿನಾಂಕ:26–08–2021**ರಿಂದ ನಡೆಸಲು ತಿಳಿಸಲಾಗಿದೆ. ಉಲ್ಲೇಖಿತ (3) ರಿಂದ (5)ರವರೆಗಿನ ಪ್ರವೇಶಾತಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದಿಂದ ಕಾಲಕಾಲಕ್ಕೆ ಹೊರಡಿಸಲಾದ ಸುತ್ತೋಲೆ/ಅಧಿಸೂಚನೆಗಳಲ್ಲಿ ತಿಳಿಸಿರುವ ನಿಯಮಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಲು ಈ ಮೂಲಕ ತಿಳಿಸಲಾಗಿದೆ.

**ಸೂಚನೆ: 2021–22ನೇ ಶೈಕ್ಷಣಿಕ ಸಾಲಿನ ಸ್ನಾತಕ ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್ ಪ್ರವೇಶಾತಿಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.**

| | | |
|---|---|---|
| **01** | ಪ್ರವೇಶ ಪ್ರಕ್ರಿಯೆ ಆನ್‌ಲೈನ್ ಮೂಲಕ ಪ್ರಾರಂಭ ದಿನಾಂಕ | **26–08–2021** |
| **02** | ದಂಡ ಶುಲ್ಕವಿಲ್ಲದೆ ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆಯಲು ಕಡೆಯ ದಿನಾಂಕ | **26–08–2021 ರಿಂದ 30–09–2021** |
| **03** | ರೂ. 200/–ಗಳ ದಂಡ ಶುಲ್ಕದೊಂದಿಗೆ ಪ್ರಥಮ ವರ್ಷದ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆಯಲು ಕಡೆಯ ದಿನಾಂಕ (ಯು.ಜಿ.ಸಿ ನಿಯಾಮವಳಿ ಹಾಗೂ ಸರ್ಕಾರದ ಪತ್ರದನ್ವಯ ನಿಗದಿಪಡಿಸಿದೆ.) | **01–10–2021 ರಿಂದ 30–10–2021** |

---2

ಸ್ನಾತಕ ಪದವಿ ಆನ್‌ಲೈನ್ ಪ್ರವೇಶಾತಿಗೆ ಸಂಬಂಧಿಸಿದಂತೆ ಯಾವುದಾದರು ಸಮಸ್ಯೆಗಳಿದ್ದಲ್ಲಿ, ಸರ್ಕಾರದಿಂದ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ನೋಡೆಲ್ ಅಧಿಕಾರಿಗಳನ್ನು ದೂರವಾಣಿ ಮುಖಾಂತರ ಸಂಪರ್ಕಿಸುವುದು.

1. ಡಾ. ಅಶ್ಫಕ್ ಅಹ್ಮದ್ – 9845142267 2. ಡಾ. ಹೆಚ್.ಎಂ. ವಾಗ್ದೇವಿ – 9448254093

3. ಡಾ. ಮಂಜುನಾಥ್ ಎನ್. – 8861273638 4. ಶ್ರೀ ಗಿರೀಶ್ ಹೆಚ್.ಟಿ. – 9449866139

5. ಡಾ. ಶೋಯೆಬ್ ಅಹಮದ್ – 9035089070 6. ಡಾ. ಶ್ರೀಶೈಲ – 9342331770

7. ಡಾ. ಶ್ರೀಕಾಂತ್ ಕೆ.ಎನ್.– 9980377886 8. ಡಾ. ಚಂದ್ರಶೇಖರ ಹೆಚ್. –9739993080

ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದ ವಿಶ್ವವಿದ್ಯಾಲಯದ ಮಾರ್ಗಸೂಚಿಯನ್ನು ಅನುಬಂಧ-1ರಲ್ಲಿ ಹಾಗೂ ಸರ್ಕಾರವು ಹೊರಡಿಸಲಾದ ಯು.ಯು.ಸಿ.ಎಂ.ಎಸ್. ನ ಮಾರ್ಗಸೂಚಿಯನ್ನು ಅನುಬಂಧ-2ರಲ್ಲಿ ವಿಶ್ವವಿದ್ಯಾಲಯದ ಅಂತರ್‌ಜಾಲದಲ್ಲಿ (www.kuvempu.ac.in) ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಮಾನ್ಯ ಕುಲಸಚಿವರ ಅನುಮೋದನೆಯಾಗಿದೆ

ಉಪ ಕುಲಸಚಿವ 25/8/21
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451.
ಶಿವಮೊಗ್ಗ ಜಿಲ್ಲೆ. 25/8/21

ಗೆ,

ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹಾಗೂ ಘಟಕ ಕಾಲೇಜುಗಳು, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ನೇರ ಆಡಳಿತಕ್ಕೊಳಪಟ್ಟ ಕಾಲೇಜು, ಶಂಕರಘಟ್ಟ

ಪ್ರತಿಗಳು:

1. ಆಪ್ತ ಸಹಾಯಕರು, ಕುಲಪತಿಗಳು: ಕುಲಸಚಿವರು: ಕುಲಸಚಿವರು(ಪ): ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಕಛೇರಿ ಪ್ರತಿ.